सत्यमेव जयते

ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

11ನೇ ಆಗಸ್ಟ್ 2016

ಸನ್ಮಾನ್ಯ ಸಿದ್ದರಾಮಯ್ಯ ರವರೇ,

ಆಗಸ್ಟ್ 6, 2015ರಂದು ನಾನು ಕರ್ನಾಟಕದ ಮಕ್ಕಳನ್ನು ಘೋರವಾದ ಲೈಂಗಿಕ ಶೋಷಣೆಯ ರಕ್ಷಣೆ ಕುರಿತು ನಿಮಗೆ ಪತ್ರ ಬರೆದಿದ್ದು ಅದಕ್ಕೆ ಸೂಕ್ತ ಪ್ರತಿಕ್ರಿಯೆ ನನಗೆ ಲಭ್ಯವಾಗಬೇಕಿದೆ.

ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟಿಸಲಾದ ಲೇಖನ ಕುರಿತು ನಾನು ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ಅದರಲ್ಲಿ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ವರದಿಯನ್ನು ನಮೂದಿಸಲಾಗಿದ್ದು 2010 ಮತ್ತು 2015ರ ನಡುವೆ 15 ಮಕ್ಕಳು ಮಕ್ಕಳ ಆರೈಕೆ ಸಂಸ್ಥೆಗಳಲ್ಲಿ ಲೈಂಗಿಕ ಶೋಷಣೆಗೆ ಒಳಗಾಗಿದ್ದಾರೆ ಎಂದು ಹೇಳಲಾಗಿದೆ. ಇನ್ನೂ ಆಘಾತಕಾರಿ ವಿಷಯವೆಂದರೆ ಈ ವರದಿಯಲ್ಲಿ ಹೇಳಿದಂತೆ ಬಹಳಷ್ಟು ಅಪರಾಧಗಳು ಬಾಲಾಪರಾಧಿಗಳ ನ್ಯಾಯ ಮಂಡಳಿ ಅಥವಾ ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯರಿಂದಲೇ ನಡೆದಿರುವುದು. ಚಳವಳಿಗಾರರು ಇದರ ಸಂಖ್ಯೆ ಇನ್ನೂ ಹೆಚ್ಚಾಗಿದೆ ಎನ್ನುತ್ತಾರೆ. ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಐದು ಜಿಲ್ಲೆಗಳಲ್ಲಿ 224 ಮಕ್ಕಳು 9 ಸರ್ಕಾರದ ಮಕ್ಕಳ ಆರೈಕೆ ಕೇಂದ್ರಗಳಿಂದ ಪರಾರಿಯಾಗಿದ್ದಾರೆ ಮತ್ತು ಅವರಲ್ಲಿ ಅರ್ಧಕ್ಕಿಂತಲೂ ಕಡಿಮೆ ಜನರನ್ನು ಇಂದಿಗೂ ಪತ್ತೆ ಮಾಡಲಾಗಿಲ್ಲ.

ಈ ವರದಿ ನಮ್ಮ ಮಕ್ಕಳ ಸುರಕ್ಷತೆಯ ಅತ್ಯಂತ ಪ್ರಮುಖ ಸಮಸ್ಯೆಯ ಕುರಿತು ಹಿಂದೆ ಹಲವು ಸಂದರ್ಭಗಳಲ್ಲಿ ನಾನು ತಮಗೆ ಬರೆದಿದ್ದರೂ ಕರ್ನಾಟಕ ಸರ್ಕಾರ ನಿರಾಶಾದಾಯಕ ದಾಖಲೆ ಹೊಂದಿದೆ. ಈ ವರದಿಯ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಎಲ್ಲ ಸಂಬಂಧಪಟ್ಟ ಇಲಾಖೆಗಳಲ್ಲಿ ಕೂಡಲೇ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕು ಮತ್ತು ಪ್ರಾಮಾಣಿಕ ಹಾಗೂ ಕಠಿಣ ಕ್ರಮವನ್ನು ಪೋಸ್ಕೋ ಕಾಯ್ದೆ ಸೂಕ್ತ ಅನುಚ್ಛೇದಗಳ ಅನ್ವಯ ಮತ್ತು ಅಪರಾಧ ಕಾಯ್ದೆಯ ಅನ್ವಯ ತೆಗೆದುಕೊಂಡು ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕು.

ಅಂತಹ ಅಪರಾಧಗಳ ಆರೋಪಕ್ಕೆ ಒಳಗಾದ ನಮ್ಮ ಮಕ್ಕಳ ಸುರಕ್ಷತೆ ಮತ್ತು ಸೌಖ್ಯದ ದೃಢೀಕರಣ ನೀಡದೇ ಇರುವುದು ನಮ್ಮ ರಾಜ್ಯದ ಸಂಸ್ಥೆಗಳು ಮತ್ತು ಅಧಿಕಾರಿಗಳಿಗೆ ಬಹಳ ಅವಮಾನಕರ ವಿಷಯವಾಗಿದೆ. ಈ ವಿಷಯ ಕುರಿತು ಕೂಡಲೇ ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ.

ತಮ್ಮ ವಿಶ್ವಾಸಿ

ರಾಜೀವ್ ಚಂದ್ರಶೇಖರ್

ಶ್ರೀ ಸಿದ್ದರಾಮಯ್ಯ ರವರು,
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು

11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL